## ಇದು ಗಾಂಧಿಯ 'ಹರಿಜನ್'

ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧೀಜಿಯವರು ಶುರುಮಾಡಿದ ಪತ್ರಿಕೆಗಳಲ್ಲಿ 'ಹರಿಜನ್' ಎನ್ನುವ ಆಂಗ್ಲಭಾಷೆಯ ದಿನಪತ್ರಿಕೆ ಮುಖ್ಯವಾದದ್ದು. ಇದರ ಸಂಪಾದಕರು ಗಾಂಧಿ ಮತ್ತು ಕಸ್ತೂರಬಾ ಅವರಿಗೆ ಮಗನಂತಿದ್ದ 'ಮಹದೇವ ದೇಸಾಯಿ'ಯವರು. 1942ರಲ್ಲಿ ಮಹದೇವ ದೇಸಾಯಿಯವರು ನಿಧನರಾದರು. ತದನಂತರ ಈ ಪತ್ರಿಕೆಯನ್ನು ಪ್ಯಾರೆಲಾಲ್ ನಯ್ಯರ್ ಅವರು ಸಂಪಾದಕರಾಗಿ ಮುನ್ನಡೆಸಿದರು. ಪ್ಯಾರೆಲಾಲ್ ಅವರ ತಂಗಿ ಸುಶೀಲಾ ನೈಯರ್ ಗಾಂಧೀಜಿಯವರಿಗೆ ವೈದ್ಯೆಯಾಗಿದ್ದರು. ಮಹದೇವ ದೇಸಾಯಿ, ಪ್ಯಾರೇಲಾಲ್ ನಯ್ಯರ್ ಹೆಸರನ್ನು ಪತ್ರಿಕೆಯಲ್ಲಿ ಕಾಣಬಹುದು.

—ಉದಯ ಶಾಸ್ತ್ರೀ, ಮೈಸೂರು


On Trial

HARIJAN


Bapu

HARIJAN

## ವರ್ಣರಂಜಿತ ಕೀಟ

ವರ್ಣರಂಜಿತವಾಗಿ ಕಾಣುತ್ತಿರುವ ಈ ಕೀಟದ ವೈಜ್ಞಾನಿಕ ಹೆಸರು ಯೂರಿ ಬ್ರಾಕಿಸ್ ಟೋಮೆಂಟೋಸಾ (Eury Brachys Tomentosa). ಇದು ಏಷ್ಯಾ, ಆಸ್ಟ್ರೇಲಿಯಾ ಮತ್ತು ಆಫ್ರಿಕಾದಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ. ಭಾರತದಲ್ಲಿ ತೀರಾ ಕಡಿಮೆ. ಸಣ್ಣ ಸಣ್ಣ ಗಿಡ–ಮರಗಳ ಎಲೆಗಳೇ ಇದರ ಆಹಾರ. ಮರದ ತೊಗಟೆಯನ್ನು ಕೊರೆದು ನಿಧಾನವಾಗಿ ಇಡೀ ಮರವನ್ನೇ ನಾಶ ಮಾಡುವ ತಾಕತ್ತು ಇದಕ್ಕಿದೆ.



ಮರಗಳು ಹಾಗೂ ಪೊದೆ ಸಸ್ಯಗಳಲ್ಲಿ ವಾಸಿಸುವ ಈ ಕೀಟವು ಶ್ರೀಗಂಧದ ಮರ ಹಾಗೂ ಎಕ್ಕದ ಗಿಡಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಮೊಟ್ಟೆಗಳನ್ನು ಎಲೆಯ ಅಡಿ ಭಾಗದಲ್ಲಿ ಇಡುವ ಈ ಕೀಟವು ಒಮ್ಮೆಗೆ 30ರಿಂದ 40 ಮೊಟ್ಟೆಗಳನ್ನು ಇಡುವ ಸಾಮರ್ಥ್ಯವನ್ನು ಹೊಂದಿದೆ. ಮೊಟ್ಟೆ ಒಡೆದು ಮರಿಕೀಟ ಹೊರಬರಲು ಸುಮಾರು 15ರಿಂದ 21 ದಿನಗಳು ಬೇಕು. ಬೆಳೆದ ಕೀಟವು 1ರಿಂದ 3 ಸೆಂಟಿಮೀಟರ್ ಇರುತ್ತದೆ. ಇದರ ಜೀವಿತಾವಧಿ 2 ರಿಂದ 3 ತಿಂಗಳುಗಳು. ಹೆಣ್ಣು ಕೀಟವು ಗಂಡು ಕೀಟಕ್ಕಿಂತ ದೊಡ್ಡದಾಗಿ ಇರುತ್ತದೆ. ಹೆಣ್ಣು ಕೀಟವು ಆಕರ್ಷಕ ಬಣ್ಣ ಹೊಂದಿರುತ್ತದೆ. ಹಿಮ್ಮುಖವಾಗಿ ಹಾರುವುದು ಇದರ ಮತ್ತೊಂದು ವಿಶೇಷ. ಈಚೆಗೆ ಹೊರಗಡೆ ಸುತ್ತಾಡುವಾಗ ಇದು ಕಣ್ಣಿಗೆ ಬಿತ್ತು.

—ಕೆ.ಎಸ್. ಸವಿತ, ಬೆಂಗಳೂರು








## ಉಕ್ರೇನ್‌ನ ಜಾನಪದ ಕಥೆಗಳು

ರಷ್ಯಾದೊಂದಿಗಿನ ಯುದ್ಧದಲ್ಲಿ ಬಳಲಿ ಬಸವಳಿದರೂ ಎದೆಗುಂದದೆ ಹೋರಾಟದಲ್ಲಿ ತೊಡಗಿರುವ ಉಕ್ರೇನ್ ದೇಶದ ಎದೆಗಾರಿಕೆಯನ್ನು ಮೆಚ್ಚಲೇಬೇಕು. ಈ ದೇಶದ ನಾಗರಿಕತೆಯ ಪರಿಚಯಿಸುವ ಪುಸ್ತಕವೊಂದು ಈಚೆಗೆ ನಮ್ಮ ಗಮನ ಸೆಳೆಯಿತು. ಬೆಂಗಳೂರಿನಲ್ಲಿ ವಾಸವಾಗಿರುವ ಮಗಳು–ಅಳಿಯ ಸುಧಾ ಮತ್ತು ಪ್ರವೀಣ ಕಟ್ಟೆಪ್ಪನವರ್ ಮನೆಯಲ್ಲಿ ಈ ಕೃತಿ ಕಣ್ಣಿಗೆ ಬಿತ್ತು. ಮೊಮ್ಮಕ್ಕಳಾದ ಸಿಂಚನಾ ಮತ್ತು ಸಿದ್ಧಾಂತ ಅವರಿಗೆ ಪ್ರತಿದಿನ ಕನ್ನಡ ಕಲಿಸಲು ಈ ಪ್ರತಿಯನ್ನು ಬಳಸುತ್ತಿದ್ದಾರೆ. ಸುಮಾರು 33 ವರ್ಷಗಳು ಹಳೆಯದಾದ ಈ ಪುಸ್ತಕದ ಸಂಕಲನ ಕರ್ತೃ ವಿ. ಬೊಯ್ಕೊ ಮತ್ತು ಅನುವಾದ ಕೆ.ಎಲ್ ಗೋಪಾಲಕೃಷ್ಣ ಅವರು. 1988ರಲ್ಲಿ ಸೋವಿಯತ್ ಒಕ್ಕೂಟದ ಬಗ್ಗೆ ಪ್ರಕಟವಾದ ಈ ಪುಸ್ತಕವನ್ನು ನವ ಕರ್ನಾಟಕ ಪಬ್ಲಿಕೇಶನ್ಸ್ ಹೊರ ತಂದಿದೆ. ಉಕ್ರೇನ್ ದೇಶದ ನಾಗರಿಕತೆಯನ್ನು ಪರಿಚಯಿಸುವ ಅದ್ಭುತವಾದ ಜಾನಪದ ಕತೆಗಳು ಇದರಲ್ಲಿದ್ದು, ಇವು ಮಕ್ಕಳನ್ನು ಮನಸೂರೆಗೊಳಿಸುತ್ತವೆ. ಈ ಪುಸ್ತಕದ ಕಥೆಗಳ ಮೂಲಕ ಮೊಮ್ಮಕ್ಕಳೊಂದಿಗಿನ ಒಡನಾಟವು ನನ್ನ ಬೆಂಗಳೂರಿನ ವಾಸ್ತವ್ಯವನ್ನು ಅರ್ಥಪೂರ್ಣವಾಗಿಸಿತು.

—ವಿಜಯಕುಮಾರ್ ಧ. ನೇರ್ಲೆಕರ್, ಮಂದಾಕಿನಿ, ಬೆಳಗಾವಿ